O.S.No. 303.2017 P W - 3

ದಿನಾಂಕ 14.02.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದ ಃ

ನಾನು ಎಸ್.ಎಸ್. ಎಲ್. ಸಿ. ಯವರೆಗೆ ಓದಿರುತ್ತೇನೆ. ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ನನಗೆ ನ್ಯಾಯಾಲಯದಿಂದ ಸಾಕ್ಷಿ ಹೇಳಲು ಯಾವುದೇ ನೋಟಿಸ್ ಬಂದಿರುವುದಿಲ್ಲ. ಸಾಕ್ಷಿ ಹೇಳಲು ನಾನೇ ಬಂದಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾವಾ ಸ್ವತ್ತಿನ ನಂಬರ್ , ವಿಸ್ತೀರ್ಣ ನನಗೆ ಗೊತ್ತು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ವಿಚಾರಗಳನ್ನು ವಾದಿ ಹೇಳಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ್ 120/5. ವಿಸ್ತೀರ್ಣ 26 ಗುಂಟೆ , ಅದರ ಮೂಲ ಸರ್ವೆ ನಂಬರ್ 120/3.

ದಾವಾ ಸ್ವತ್ತು ಮೂಲತಃ ಚಿಕ್ಕ ತಿಮ್ಮಮ್ಮ ನವರಿಗೆ ಸೇರಿದ್ದು. ಸದರಿ ಸರ್ವೆ ನಂಬರ್ ನಲ್ಲಿ ಒಟ್ಟು 2 ಎಕರೆ 9 ಗುಂಟೆ ಇದೆ. ಮೂಲತಃ ದಾವಾ ಸರ್ವೆ ನಂಬರ್ ಮುದ್ದಲಿಂಗೇಗೌಡರ ಮಗ ಲಿಂಗ ರವರಿಗೆ ಸೇರಿದ್ದು ಎಂದರೆ ಗೊತ್ತಿಲ್ಲ. ಸರ್ವೆ ನಂಬರ್ 120/3 ರ ಸ್ವತ್ತನ್ನು ಮುದ್ದಲಿಂಗೇಗೌಡರ ಹೆಂಡತಿ ಗಿರಿಯಮ್ಮ ರವರು ದೇವೀರಮ್ಮ ರವರಿಗೆ ದಿನಾಂಕ 24.02.1942 ರಲ್ಲಿ ದಾನಪತ್ರವನ್ನು ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ದೇವಿರಮ್ಮನವರ ಬಗ್ಗೆ ನನಗೆ ಮಾಹಿತಿ ಇಲ್ಲ. ದೇವೀರಮ್ಮ ನವರಿಗೆ ಇಬ್ಬರು ಹೆಣ್ಣು ಮಕ್ಕಳು. ದೊಡ್ಡ ತಿಮ್ಮಮ್ಮ , ಚಿಕ್ಕ ತಿಮ್ಮಮ್ಮ ಎಂದರೆ ಗೊತ್ತಿಲ್ಲ. ಚಿಕ್ಕ ತಿಮ್ಮಮ್ಮ ಮಾತ್ರ ಗೊತ್ತು. ದಾವಾ ಸ್ವತ್ತು ದೊಡ್ಡ ತಿಮ್ಮಮ್ಮ ಮತ್ತು ಚಿಕ್ಕ ತಿಮ್ಮಮ್ಮ ನವರ ತಾಯಿಗೆ ಸೇರಿದ್ದು , ಅದರಲ್ಲಿ ಇಬ್ಬರಿಗೂ ಹಕ್ಕು ಇದೆ ಎಂದರೆ ಗೊತ್ತಿಲ್ಲ. ಚಿಕ್ಕ ತಿಮ್ಮಮ್ಮ ನಮ್ಮ ಊರಿನಲ್ಲಿ ವಾಸವಾಗಿಲ್ಲ ಎಂದರೆ ಸರಿ. ಚಿಕ್ಕ ತಿಮ್ಮಮ್ಮ ಮದ್ದೂರು ತಾಲ್ಲೂಕಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ದೊಡ್ಡ ತಿಮ್ಮಮ್ಮ ನವರು ನಮ್ಮ ಊರಿನಲ್ಲೇ ವಾಸವಾಗಿಲ್ಲ, 1 ನೇ ಪ್ರತಿವಾದಿಯ ತಾಯಿ ದೊಡ್ಡ ತಿಮ್ಮಮ್ಮ ಎಂದರೆ ಗೊತ್ತಿಲ್ಲ. 120/3 ರಲ್ಲಿ 1 ಎಕರೆ 20 ಗುಂಟೆ ಜಮೀನನ್ನು ನನ್ನ ತಂದೆ ಖರೀದಿ ಮಾಡಿದ್ದಾರೆ ಎಂದರೆ ಸರಿ. ಪಹಣಿಯಲ್ಲಿ 1 ಎಕರೆ 23 ಗುಂಟೆ ಇದೆ ಎಂದು ನುಡಿಯುತ್ತಾರೆ. ನಮಗೆ ಆದ ಕ್ರಯ ಪತ್ರಕ್ಕೆ 1 ನೇ ಪ್ರತಿವಾದಿ ಹಾಗೂ ಅವರ

ತಾಯಿ ಪಾರ್ಟ ಇದ್ದರೋ ಇಲ್ಲವೋ ಗೊತ್ತಿಲ್ಲ. 1 ನೇ ಪ್ರತಿವಾದಿ ಹಾಗೂ ಅವರ ತಾಯಿ ನಮ್ಮ ಕ್ರಯ ಪತ್ರಕ್ಕೆ ಸಹಿ ಹಾಕದ ಕಾರಣ , ಅವರಿಗೂ ಸಹ ಸದರಿ ಸ್ವತ್ತಿನಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ.

ಚಿಕ್ಕತಿಮ್ಮಮ್ಮನವರ ಒಡಹುಟ್ಟಿದವರು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಖರೀದಿ ಮಾಡಿದ್ದ 1 ಎಕರೆ 20 ಗುಂಟೆ ಜಮೀನಿಗೆ 1 ನೇ ಪ್ರತಿವಾದಿ ಮತ್ತು ಅವರ ತಮ್ಮಂದಿರು O.S. 378/2016 ರಂತೆ ವಿಭಾಗಕ್ಕಾಗಿ ದಾವೆ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆ ಇದೇ ನ್ಯಾಯಾಲಯದಲ್ಲಿ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿ, ಮಾದ ಮತ್ತು ನಾಗರಾಜುರವರ ಮೇಲೆ ದಾವೆ ಹಾಕಿದ್ದಾರೆ. 2016 ರಲ್ಲಿ ವಾದಿ ದಾವಾ ಸ್ವತ್ತನ್ನು ಖರೀದಿಸಿದ್ದಾರೆ. ಸದರಿ ರವರ ಕ್ರಯ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಹಾಕಿದವರ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲೂ ಸಹ ದೊಡ್ಡ ತಿಮ್ಮಮ್ಮನವರ ಮಕ್ಕಳಿಗೆ ಹಕ್ಕು ಇದೆ ಎಂದರೆ ಗೊತ್ತಿಲ್ಲ. ನಮ್ಮ ಜಮೀನು ದಾವಾ ಸ್ವತ್ತಿನ ಉತ್ತರಕ್ಕೆ ಇದೆ. ನಮ್ಮ ಸ್ವತ್ತಿನಲ್ಲಿ ಹಾಗೂ ವಾದಿಯ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ಯವರಿಗೆ ಹಕ್ಕು ಇದೆ ಎಂದರೆ ಸರಿ. ಇಬ್ಬರೂ ಸೇರಿ ಜಮೀನನ್ನು ಖರೀದಿ ಮಾಡಿರುವುದರಿಂದ ವಾದಿಗೂ ಹಾಗೂ ನಮಗೂ ಸಹಾಯ ವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಯ ಹೇಳಿಕೆಯ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತಿನಲ್ಲಿ ಸಂಪೂರ್ಣ ಮಾಲೀಕತ್ವ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆಯಾಗಲೀ ಅಥವಾ ಅದರ ದಾಖಲೆಗಳ ಬಗ್ಗೆಯಾಗಲೀ ಸಂಪೂರ್ಣ ಮಾಹಿತಿ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಮುಗಿಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ